ರಾಜ್ಯದ ಯೋಜನೆಗಳಿಗೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಸಲಹೆ ನೀಡುವ ಸಲುವಾಗಿ ರಾಜ್ಯ ಯೋಜನಾ ಮಂಡಳಿಯನ್ನು ರಚಿಸಿ ಉಲ್ಲೇಖ (1) ರಲ್ಲಿ ಓದಲಾದ, ದಿನಾಂಕ: 4.10.1993ರ ಸರ್ಕಾರದ ಆದೇಶದಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ (2) ರಿಂದ (9) ರವರೆಗೆ ಓದಲಾದ ಸರ್ಕಾರದ ಆದೇಶಗಳಲ್ಲಿ ರಾಜ್ಯ ಯೋಜನಾ ಮಂಡಳಿಯನ್ನು ಕಾಲಕಾಲಕ್ಕೆ ಪುನರ್ರಚಿಸಲಾಗಿರುತ್ತದೆ. ಉಲ್ಲೇಖ (10) ರಲ್ಲಿ ಓದಲಾದ ದಿನಾಂಕ 22-9-2010ರ ಸರ್ಕಾರದ ಆದೇಶದಲ್ಲಿ ಶ್ರೀ ರಾಮಚಂದ್ರ ಗೌಡ, ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿರುತ್ತದೆ ಮತ್ತು ಉಲ್ಲೇಖ (11) ರಲ್ಲಿ ಓದಲಾದ ದಿನಾಂಕ: 4.11.2010 ರ ಸರ್ಕಾರದ ಅಧಿಸೂಚನೆಯಲ್ಲಿ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು

ನೀಡಲಾಗಿರುತ್ತದೆ. ಸರ್ಕಾರವು ಈಗ ರಾಜ್ಯ ಯೋಜನಾ ಮಂಡಳಿಗೆ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಉದ್ದೇಶಿಸಿರುತ್ತದೆ. ಅದರಂತೆ ರಾಜ್ಯ ಯೋಜನಾ ಮಂಡಳಿಯನ್ನು ಪುನರ್‌ರಚಿಸಲಾಗಿದೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 82 ಎಸ್‌ಪಿಬಿ 2011, ಬೆಂಗಳೂರು, ದಿನಾಂಕ: 9.3.2011

ರಾಜ್ಯ ಯೋಜನಾ ಮಂಡಳಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡಂತೆ ಪುನರ್‌ರಚಿಸಲಾಗಿದೆ.

1) ಮಾನ್ಯ ಮುಖ್ಯಮಂತ್ರಿಗಳು – ಅಧ್ಯಕ್ಷರು

2) ಮಾನ್ಯ ಶ್ರೀ ರಾಮಚಂದ್ರ ಗೌಡ – ಉಪಾಧ್ಯಕ್ಷರು

3) ಮಾನ್ಯ ಸಚಿವರು, ಉನ್ನತ ಶಿಕ್ಷಣ, ಯೋಜನೆ ಸಾಂಖ್ಯಿಕ,
ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ – ಸದಸ್ಯರು

4) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು – ಸದಸ್ಯರು

5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು
ಅಭಿವೃದ್ಧಿ ಆಯುಕ್ತರು – ಸದಸ್ಯರು

6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ – ಸದಸ್ಯರು

7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ – ಸದಸ್ಯರು

8) ಡಾ॥ ಎಂ. ಮಹಾದೇವಪ್ಪ – ಸದಸ್ಯರು
ನಿರ್ದೇಶಕರು ಜೆ.ಎಸ್.ಎಸ್. ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ
(ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರ)

9) ಶ್ರೀಮತಿ ಸುಧಾಮೂರ್ತಿ – ಸದಸ್ಯರು
ಇನ್‌ಫೋಸಿಸ್ ಪ್ರತಿಷ್ಠಾನ, ಬೆಂಗಳೂರು
(M.Y.R.A.D.A ಪ್ರತಿನಿಧಿ)

10) ಪ್ರೊ. ಹೆಚ್.ಪಿ. ಕಿಂಚಾ – ಸದಸ್ಯರು
ಮಾಜಿ ಕುಲಪತಿಗಳು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ಇಂಜನಿಯರಿಂಗ್ ಕ್ಷೇತ್ರ)

11) ಡಾ॥ ರಘುನಂದನ್, ಮಾಜಿ ಕಾರ್ಯದರ್ಶಿಗಳು – ಸದಸ್ಯರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕರ್ನಾಟಕ ಸರ್ಕಾರ

12) ಪ್ರೊ. ಜಿ.ವಿ. ಜೋಶಿ – ಸದಸ್ಯರು
ಜಸ್ಟೀಸ್ ಕೆ.ಎಸ್. ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ನಿಟ್ಟೆ–574 110

13) ಶ್ರೀ ಎಂ.ಸಿ. ಕೊಡ್ಲಿ – ಸದಸ್ಯರು
ಅರ್ಥಶಾಸ್ತ್ರ ಪ್ರೊಫೆಸರ್ (ನಿವೃತ್ತ)
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

14) ಡಾ: [illegible] – ಸದಸ್ಯರು
13/23, ಬಜಾರ್ ರಸ್ತೆ
ಕೃಷ್ಣರಾಜನಗರ
ಮೈಸೂರು ಜಿಲ್ಲೆ

15) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು – ಪದನಿಮಿತ್ತ ಸದಸ್ಯ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಕಾರ್ಯದರ್ಶಿ
ಸಾಂಖ್ಯಿಕ ಇಲಾಖೆ

2) ಉಲ್ಲೇಖ (5) ರಲ್ಲಿ ಓದಲಾದ ದಿನಾಂಕ: 17.7.2001ರ ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುವ ರಾಜ್ಯ ಯೋಜನಾ ಮಂಡಳಿಯ ಕಾರ್ಯಗಳು ಮುಂದುವರೆಯುತ್ತದೆ. ಅವುಗಳು ಕೆಳಕಂಡಂತಿದೆ:–

1) ಪಂಚವಾರ್ಷಿಕ ಯೋಜನೆ ಮತ್ತು ವಾರ್ಷಿಕ ಯೋಜನೆಗಳನ್ನು ರೂಪಿಸುವುದು ಹಾಗೂ ಕಾರ್ಯಗತಗೊಳಿಸುವ ಬಗ್ಗೆ ಸಲಹೆ ನೀಡುವುದು.

2) ಸ್ವಾಭಾವಿಕ ಮತ್ತು ಮಾನವ ಸಂಪನ್ಮೂಲಗಳ ಗರಿಷ್ಠ ಬಳಕೆಗಾಗಿ ನೀತಿಗಳನ್ನು ಸಲಹೆ ನೀಡುವುದು.

3) ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ಕಡಿಮೆಗೊಳಿಸಲು ಸೂಕ್ತವಾದ ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಸಲಹೆ ನೀಡುವುದು.

4) [illegible] ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳ ಹೂಡಿಕೆಯನ್ನು ಸುಧಾರಿಸಲು ಕ್ರಮಗಳನ್ನು ಸೂಚಿಸುವುದು.

5) [illegible] ಬಂಡವಾಳ ಹೂಡಿಕೆ ಮಟ್ಟಗಳ ಬಗ್ಗೆ ಮತ್ತು ಅದಕ್ಕಾಗಿ ಸಂಪನ್ಮೂಲ ಸಂಗ್ರಹಣೆಗೆ ಅಗತ್ಯವಾದ ಸಲಹೆ ನೀಡುವುದು

6) ರಾಷ್ಟ್ರೀಯ ಯೋಜನೆಯ ಚೌಕಟ್ಟಿನೊಳಗೆ ರಾಜ್ಯ ಯೋಜನೆಗೆ ಸೂಕ್ತವಾದ ಆದ್ಯತೆ ಹಾಗೂ ತಂತ್ರಗಳನ್ನು ರೂಪಿಸಲು ಸಲಹೆ ನೀಡುವುದು.

7) ಯೋಜನಾ .ಕಾರ್ಯಕ್ರಮಗಳು/ಯೋಜನೆಗಳ ಅನುಷ್ಠಾನ ಮತ್ತು ಇವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಅಗತ್ಯವಾದ ಸೂಕ್ತ ಸಲಹೆ ನೀಡುವುದು.

8) ವಿಕೇಂದ್ರೀಕೃತ ಯೋಜನೆಯನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ಸೂಚಿಸುವುದು ಹಾಗೂ ವಿಶೇಷವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಗತಗೊಳಿಸುವಿಕೆ ಹಾಗೂ ಈ ಯೋಜನೆಗಳನ್ನು ರಾಜ್ಯ ವಲಯ ಯೋಜನೆಗಳಲ್ಲಿ ವಿಲೀನಗೊಳಿಸಲು ಅಗತ್ಯವಾದ ಕ್ರಮಗಳ ಸಲಹೆ ನೀಡುವುದು.

9) ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ವಹಿಸುವ ವಿಷಯಗಳ ಬಗ್ಗೆ ಶಿಫಾರಸ್ಸು ಮಾಡುವುದು.

10) ರಾಜ್ಯ ಯೋಜನಾ ಮಂಡಳಿಯ ಕೆಲಸಗಳಿಗೆ ಅಗತ್ಯವಾದ ಸಂಶೋಧನಾ ಅಧ್ಯಯನ ಮತ್ತು ವಿಚಾರ ಸಂಕಿರಣಗಳನ್ನು ಸರ್ಕಾರದ ಹೊರಗಿನ ವಿಶ್ವವಿದ್ಯಾನಿಲಯಗಳು ಅಥವಾ ಇತರೆ ಸಂಶೋಧನಾ ಸಂಸ್ಥೆಗಳಿಂದ ಪ್ರಾಯೋಜಿಸುವುದು.

3) ರಾಜ್ಯ ಯೋಜನಾ ಮಂಡಳಿಯ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳ ಅಧಿಕಾರ ಹಾಗೂ ಮುಂದಾಳತ್ವದಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರು ಮಂಡಳಿಯ ಕೆಲಸ ಕಾರ್ಯಗಳು, ದಕ್ಷತೆ ಮತ್ತು ಸುಗಮವಾಗಿ ನೆರವೇರಲು ಅಗತ್ಯವಾದ ಅಧಿಕಾರವನ್ನು ಚಲಾಯಿಸುವುದು.

4) 1) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ಅನುಬಂಧ-Aರ ಪಟ್ಟಿಯ ಪ್ರಕಾರ ಮಂಡಳಿಯ ಅಧಿಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆಯನ್ನು ನೀಡಲು ಮಂಜೂರಾತಿಯನ್ನು ನೀಡಲಾಗಿದೆ.

2) ದಿನಭತ್ಯೆ ಅನ್ವಯಿಸುವ ಕಡೆಯಲ್ಲಿ ಅದರ ಬದಲು ಮಂಡಳಿಯ ಸಭೆಗಳಿಗೆ ಹಾಜರಾಗುವ ಅಧಿಕಾರೇತರ ಸದಸ್ಯರಿಗೆ ದಿನವೊಂದಕ್ಕೆ ರೂ. 500/- ಸಭಾ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

5) ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ರಾಜ್ಯ ಯೋಜನಾ ಮಂಡಳಿಯ ಕಾರ್ಯಗಳ ಅಧಿಕಾರ ಹೊಂದಿರುತ್ತಾರೆ ಮತ್ತು ರಾಜ್ಯ ಯೋಜನಾ ಮಂಡಳಿಗೆ ಸಂಬಂಧಿಸಿದ ಲೆಕ್ಕಪತ್ರ ಶೀರ್ಷಿಕೆಯಡಿಯಿರುವ ನಿಧಿಯ ನಿರ್ವಹಣಾ ಅಧಿಕಾರ ಹೊಂದಿರುವರು.

6) ಇದಕ್ಕೆ ತಗಲುವ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ "3451-00-101-4-00" ರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 775

ಉಷಾಬಾಯಿ

ಸರ್ಕಾರದ ಅಧೀನ ಕಾರ್ಯದರ್ಶಿ-3

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ತುಮಕೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ-II) ಸರ್ಕಾರದ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ:ನಅಇ/270/ಬೆಂರೂಪ್ರಾ/2009, ಬೆಂಗಳೂರು ದಿನಾಂಕ: 28.10.2009

2) ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: ತುನಪ್ರಾ / ನ.ಯೋಸ. / ಮ.ಯೋ / 01/ 1356 / 2007-08 ದಿನಾಂಕ: 21.10.2010

3) ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ: ನಗ್ರಾಯೋ (21)/ಉನಿ(ಯೋವಿ)ತುಮಕೂರು/ಮ.ಯೋ(ಪ.II) 2010-11 ದಿನಾಂಕ: 21.10.2010 ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ತುಮಕೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ- II)ಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ತುಮಕೂರು ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾ ಯೋಜನೆ (ಪರಿಷ್ಕೃತ- II) ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(I)ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾ ಯೋಜನೆಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ತುಮಕೂರು ನಗರದ ಜನಸಂಖ್ಯೆಯು 2031 ರಲ್ಲಿ 9,50,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆಯನ್ನು ತಯಾರಿಸಲಾಗಿದೆ. ತುಮಕೂರು ನಗರದ ಸ್ಥಳೀಯ ಯೋಜನಾ ಪ್ರದೇಶದ 310.00 ಹೆಕ್ಟೇರ್ ಪ್ರದೇಶದಲ್ಲಿ 12944.89 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ನಗರದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 11774.74 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 6451.52 ಹೆಕ್ಟೇರ್ (ಶೇ. 54.92), ವಾಣಿಜ್ಯಕ್ಕಾಗಿ 479.99 ಹೆಕ್ಟೇರ್ (ಶೇ. 4.08), ಕೈಗಾರಿಕೆಗಾಗಿ 1002.41 ಹೆಕ್ಟೇರ್ (ಶೇ. 8.51), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 872.80 ಹೆಕ್ಟೇರ್ (ಶೇ. 7.41), ಉದ್ಯಾನವನ/ಬಯಲು ಜಾಗಗಳಿಗೆ 997.87 ಹೆಕ್ಟೇರ್ (ಶೇ.8.47), ಸಾರ್ವಜನಿಕ ಉಪಯುಕ್ತತೆಗಾಗಿ 44.41 ಹೆಕ್ಟೇರ್ (ಶೇ.0.38) ಹಾಗೂ ಸಾರಿಗೆ / ಸಂಪರ್ಕ ವಲಯಕ್ಕೆ 1925.41 ಹೆಕ್ಟೇರ್ (ಶೇ. 16.36) ಪ್ರದೇಶವನ್ನು ನಿಗದಿಪಡಿಸಲಾಗಿದೆ. ಮಹಾ ಯೋಜನೆ (ಪರಿಷ್ಕೃತ- II) ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 377 ಬೆಂರೂಪ್ರಾ 2010, ಬೆಂಗಳೂರು, ದಿನಾಂಕ 10.03.2011

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆ (ಪರಿಷ್ಕೃತ– II) ನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

1. ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿ ಮೈದಾಳ ಅಮಾನಿಕೆರೆ ಗ್ರಾಮದ ಸ.ನಂ. 27ರ ಭಾಗಶಃ ಹಾಗೂ ಸ.ನಂ. 273ರ ಜಮೀನುಗಳ ಭೂ ಉಪಯೋಗವನ್ನು ವಸತಿ ವಲಯವೆಂದು ಪರಿಗಣಿಸತಕ್ಕದ್ದು.
2. ತುಮಕೂರು ಅಮಾನಿಕೆರೆ ಗ್ರಾಮದ ಸ.ನಂ. 23/1ರ ಜಮೀನಿನ ಭೂ ಉಪಯೋಗವನ್ನು ವಸತಿ ವಲಯವೆಂದು ಪರಿಗಣಿಸತಕ್ಕದ್ದು.

ಮಹಾ ಯೋಜನೆ (ಪರಿಷ್ಕೃತ– II)ಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 776

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ರಸ್ತೆ ಮೇಲು ಸೇತುವೆ/ರಸ್ತೆ ಕೆಳಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ GAD ತಯಾರಿಸುವ ರೈಟ್ಸ್ ಸಂಸ್ಥೆಗೆ ಹಣ ಪಾವತಿಸಲು ಹಣ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ : 1) ದಿನಾಂಕ 29–05–2007ರ ಸರ್ಕಾರಿ ಆದೇಶ ಸಂ. IDD 47 NSW 2007.

2) ಸೀನಿಯರ್ ಡೆಪ್ಯುಟಿ ಜನರಲ್ ಮ್ಯಾನೇಜರ್, ರೈಟ್ಸ್, ಬೆಂಗಳೂರು, ಇವರ ಪತ್ರ ಸಂಖ್ಯೆ: RITES/BLR/IDD-ROB-RUB/Billing/2011 ದಿನಾಂಕ 18–02–2011.

ಪ್ರಸ್ತಾವನೆ:

ರೈಟ್ಸ್ (ರೈಲು ಇಂಡಿಯಾ ಟೆಕ್ನಿಕಲ್ ಅಂಡ್ ಎಕನಾಮಿಕ್ ಸರ್ವೀಸಸ್) ರಸ್ತೆ ಮೇಲು ಸೇತುವೆ/ರಸ್ತೆ ಕೆಳ ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ GAD ತಯಾರಿಸಲು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು ಮೇಲೆ ಉಲ್ಲೇಖ (1)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದನ್ವಯ ರಸ್ತೆ ಮೇಲು ಸೇತುವೆ/ರಸ್ತೆ ಕೆಳಸೇತುವೆಗಳ ನಿರ್ಮಾಣಕ್ಕಾಗಿ ಯೋಜನಾ ವರದಿ ಹಾಗೂ GAD (General Arrangement Drawing) ಗಳನ್ನು ತಯಾರಿಸಲು ಮೆ॥ ರೈಟ್ಸ್ ಸಂಸ್ಥೆಯವರಿಗೆ ವಹಿಸಲಾಗಿದ್ದು ಇದಕ್ಕೆ ತಗುಲಿದ ಶುಲ್ಕ ರೂ. 96,74,906.00 ಲಕ್ಷಗಳನ್ನು (ತೊಂಬತ್ತಾರು ಲಕ್ಷದ ಎಪ್ಪತ್ತು ನಾಲ್ಕು ಸಾವಿರದ ಒಂಬೈನೂರ ಆರು ರೂಪಾಯಿಗಳು ಮಾತ್ರ) ಪಾವತಿಸುವಂತೆ ರೈಟ್ಸ್ ಸಂಸ್ಥೆಯು ಬೇಡಿಕೆ ಸಲ್ಲಿಸಿದ್ದು ಈ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2. ಈ ಮೇಲಿನ ವಿವರಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 77 ರಾರಾಹೆ 2009, ಬೆಂಗಳೂರು ದಿನಾಂಕ 08.03.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅನುಮೋದಿತ ರಸ್ತೆ ಮೇಲು ಸೇತುವೆ/ರಸ್ತೆ ಕೆಳಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯೋಜನಾ ವರದಿ ಹಾಗೂ GAD (General Arrangement Drawing) ಗಳನ್ನು ತಯಾರಿಸಲು ರೂ. 96,74,906.00 ಲಕ್ಷಗಳನ್ನು (ತೊಂಬತ್ತಾರು ಲಕ್ಷದ ಎಪ್ಪತ್ತು ನಾಲ್ಕು ಸಾವಿರದ ಒಂಬೈನೂರ ಆರು ರೂಪಾಯಿಗಳು ಮಾತ್ರ) ಈ ಸಾಲಿನ ಲೆಕ್ಕ ಶೀರ್ಷಿಕೆ "5465–01–190–3–04 (ಯೋಜನೆ)–211ರ ಕೆ–ರೈಡ್ ರಸ್ತೆ ಮೇಲು/ಕೆಳ ಸೇತುವೆ ಇದರ ಅಡಿಯಲ್ಲಿ ಒದಗಣೆ ಮಾಡಿರುವ ರೂ. 30.00 ಕೋಟಿಗಳ ಅನುದಾನದಿಂದ ರೈಟ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

2. ಈ ಮೊತ್ತವನ್ನು ಸೀನಿಯರ್ ಡೆಪ್ಯುಟಿ ಜನರಲ್ ಮ್ಯಾನೇಜರ್, ರೈಟ್ಸ್, ಬೆಂಗಳೂರು, ಇವರು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಯವರ ಮೇಲು ರುಜುವಿನೊಂದಿಗೆ ಪೇಯಿಸ್ ರಸೀತಿಯ ಮೂಲಕ ಡ್ರಾ ಮಾಡಿ ರಸ್ತೆ ಮೇಲು ಸೇತುವೆ/ರಸ್ತೆ ಕೆಳಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ GAD ತಯಾರಿಕೆಯ ಶುಲ್ಕಕ್ಕಾಗಿ ಬಿಡುಗಡೆ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಎ. ಬಾಬುರವೀಂದ್ರನಾಥ್ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 777

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್ ಇವರಿಗೆ 18 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ : ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/04/ಸಿಎಸ್ಎಲ್–ಹಾಸನ/10/3521 ದಿನಾಂಕ: 10.11.2010/20.12.2010.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರ ಎಂಬಲ್ಲಿ 18 MW (Gross) ಮತ್ತು

12.5 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 499 ಎನ್‌ಸಿಇ 2010, ಬೆಂಗಳೂರು, ದಿನಾಂಕ 25.02.2011

ಮೆ॥ ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್ ಇವರಿಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರ ಎಂಬಲ್ಲಿ 18 MW (Gross) ಮತ್ತು 12.5 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ನೀಡಲಾಗಿದೆ.

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power to Karnataka Power Transmission Corporation Limited.
3. The company shall obtain necessary statutory clearance wherever required from the respective Departments/Organizations such as Forest Department, Revenue Department, & Karnataka State Pollution Control Board, etc. for both the Sugar Mill and the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಪಿ.ಆರ್. 778 ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ॥ ಅರುಲ್ ಮಾರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರ ರದ್ದು ಮಾಡಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಪೂರ್ವಸ್ಥಿತಿಗೆ ತಂದು ಅನುಷ್ಠಾನಕ್ಕಾಗಿ ಕಾಲಾವಕಾಶ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 20.06.2009.
2. ಮೆ॥ ಅರುಲ್ ಮಾರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರ ಪತ್ರ ದಿನಾಂಕ: 15.07.2009.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ದಿನಾಂಕ: 05/07.09.2009, 03/05.12.2009.
4. ದಿನಾಂಕ: 19.04.2010ರಂದು ನಡೆದ ರಿವ್ಯೂ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ॥ ಅರುಲ್ ಮಾರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆ ಮಾಡಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಒಡಂಬಡಿಕೆಯನ್ನು ರದ್ದುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ, ಮೆ॥ ಅರುಲ್ ಮಾರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಮೂಲಭೂತ ಕೆಲಸ ಕಾರ್ಯಗಳನ್ನು ಮಾಡಿದ್ದು, ಯೋಜನೆಯ ರದ್ಧತಿ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಕೋರಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಮೆ॥ ಅರುಲ್ ಮಾರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರ ರದ್ದಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಪುನಃಶ್ಚೇತನಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸಭೆಯ ನಿರ್ಣಯವು ಈ ಕೆಳಗಿನಂತಿದೆ.

"It has a 11.2 MW capacity wind project allotted at Turuvanuru & Madanayakanahalli in Chitradurga District and has remained uncommissioned even after aged 10 years, and hence, on the basis of age of the project it was cancelled. However, M/s. AMTL pursued the development of the project simultaneously and obtained the following project related works in possessions. The Government land 23 Acre-12 Guntas has already been obtained including power evacuation approval, paid grid augmentation charges of Rs. 33 lakhs, route approval for power evacuation. Further, the physical activities such as construction of approach road, substation, casting of WTG foundation receipt of tower materials and substation materials etc., are continued at site. The representative of the firm apprised the committee that the firm has scheduled to commission 10 MW by September 2010 including 1 MW by May 2010 and balance and balance 7.25 MW & 6.75 of M/s. Marudhavel Industries Ltd by March 2011. The representation also stated

that they being the WTG manufacturer have acquired necessary & requisite clearances including submission of DPR, arrangement of project finance for the project. The firm to realize the project and they requested for restoration of capacity allotted.

Referring to above appraisal, the members in the meeting expressed that, this firm has not taken up required measures for developing the project in time. However, having seen the physical activities done at site and as presented by the representative, it was decided in the meeting to restore the cancellation order and permitted to commission the project by March 2011. Further, as a measure for firmness in completion of project a binding condition was imposed i.e., the firm has to pay a penalty of Rs. 1.00/- lakhs per MW to KREDL. If the project remained un-commissioned by end of March 2011, the amount so deposited, will be transferred to Akshaya Shakthi Nidhi in KREDL and the project will be cancelled."

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008, ಬೆಂಗಳೂರು, ದಿನಾಂಕ 04.03.2011

ಮೆ॥ ಅರುಲ್ ಮಾರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆ ಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ಧತಿ ಆದೇಶವನ್ನು ಹಿಂಪಡೆಯಲಾಗಿದೆ. ಯೋಜನೆಯ ಅನುಷ್ಠಾನಕ್ಕಾಗಿ ಕೊನೆಯ ಅವಕಾಶವಾಗಿ ದಿನಾಂಕ: 31.12.2011 ರ ತನಕ ಕಾಲಾವಕಾಶವನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ನೀಡಲಾಗಿದೆ.

1) ಮೆಗಾ ವ್ಯಾಟ್ ಒಂದಕ್ಕೆ ರೂ. 1.00 ಲಕ್ಷದಂತೆ ಕೆ.ಆರ್.ಇ.ಡಿ.ಎಲ್.ಗೆ ದಂಡ ಪಾವತಿಸತಕ್ಕದ್ದು.
2) ದಿನಾಂಕ: 31.12.2011ರ ಒಳಗೆ ಯೋಜನೆಯನ್ನು ಪ್ರಾರಂಭಿಸದಿದ್ದಲ್ಲಿ, ಎಲ್ಲಾ ಮೊತ್ತವನ್ನು ಕೆ.ಆರ.ಇ.ಡಿ.ಎಲ್.ನ "ಅಕ್ಷಯ ಶಕ್ತಿ ನಿಧಿ"ಗೆ ವರ್ಗಾವಣೆ ಮಾಡಲಾಗುವುದು ಹಾಗೂ ಯೋಜನೆಯ ತನ್ನಿಂತಾನೆ ರದ್ದಾಗಿದೆ ಎಂದು ತಿಳಿಯುವುದು.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1) ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 779

COMMERCE AND INDUSTRIES SECRETARIAT

Sub: Approval to the Project Proposal of M/s. Hindustan Coca Cola Beverages Pvt. Ltd., to establish an unit for **"Aerated Soft Drinks, Fruit Juices & Packed Drinking Water"** in Yadgir District-request for additional land-reg.

Read :
1. Government Order No. CI 301 SPI 2010, dated : 14-07-2010.
2. Proceedings of the 24th State High Level Clearance Committee (SHLCC) Meeting held on 24-01-2011.

PREAMBLE :

M/s. Hindustan Coca Cola Beverages Pvt. Ltd., has been accorded approval to establish an unit for **"Aerated Soft Drinks, Fruit Juices & Packed Drinking Water"** in Yadgir District, with an investment of Rs. 250 crores, generating employment to about 253 persons. Now, they have sought an additional 100 acres of land and a revised project to Rs. 275 crores.

In the 24th State High Level Clearance Committee (SHLCC) Meeting held on 24-01-2011, the proposal of the Company was discussed and approved.

Government has examined the recommendations made by the State High Level Clearance Committee in its 24th Meeting held on 24-01-2011, in all aspects.

Hence the following Order.

GOVERNMENT ORDER NO. CI 301 SPI 2010, BANGALORE, DATED : 11-03-2011.

Government is pleased to accord approval to the proposal of M/s. Hindustan Coca Cola Beverages Pvt. Ltd., for allotment of additional 100 acres of land in Yadgir Industrial Area (Kadechur & Badiyal Villages) with a revised project cost of Rs. 275.00 crores.

Other terms and conditions mentioned in the G.O. read at (1) above, remain same

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce and Industries Department.

P.R. 785

COMMERCE AND INDUSTRIES SECRETARIAT

CORRIGENDUM

No. CI/283/SPI/2009 Bangalore, Dated : 11-03-2011

Sub: Approval to the Project Proposal of M/s. Surana Power Ltd., to establish "435 MW Thermal Power Plant" in Wadlur and Yaganur Villages, Raichur District-change of applicable policy.

Read : 1. Government Order No. CI 283 SPI 2009, dated : 16-11-2009.
2. Proceedings of the 24th State High Level Clearance Committee (SHLCC) Meeting held on 24-01-2011.

In the Government Order No. CI 283 SPI 2009, dated : 16-11-2009, in the incentives and concessions portion please read as "applicable Government Order/Policy" in place of "Energy Policy"

Infrastructure facilities, incentives, concessions and other terms and conditions remain the same as in the G.O. read at (1) above.

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce and Industries Department.

P.R. 786

COMMERCE AND INDUSTRIES SECRETARIAT

CORRIGENDUM

No. CI/30/SPI/2010 Bangalore, Dated : 11-03-2011

Sub: Approval to acquire additional land of 524 acres in Hanganhalli Village, Sedam Taluk, Gulbarga District to enhance plant capacity of M/s Rajashree Cement Works.

Read : 1. Government Order No. CI 30 SPI 2010, dated : 25-02-2010.
2. Government Order No. CI 30 SPI 2010, dated : 18-08-2010.
3. Proceedings of the 24th State High Level Clearance Committee (SHLCC) Meeting held on 24-01-2011.

In the Government Order No. CI 30 SPI 2010, dated : 18-08-2010, in the order portion please read as **"purchase of additional 524-10 acres of land in Hanganhalli Village, Sedam Taluk, Gulbarga District, U/s 109 of KLR Act out of which 88-39 acres Government land to be allotted by Revenue Department and balance 435-11 acres to be purchased U/s 109 KLR Act by the company"** in place of **"purchase additional 524 acres of land in Hanganhalli Village, Sedam Taluk, Gulbarga District, U/s 109 of KLR Act".**

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce and Industries Department.

P.R. 787

COMMERCE AND INDUSTRIES SECRETARIAT

CORRIGENDUM

No. CI/281/SPI/2010 Bangalore, Dated : 15-03-2011

Sub: Approval to the Project Proposal of M/s, Marib Infrastructure India Pvt. Ltd., to establish an "Innovative, State of the art, multi user recreational tourism related infrastructural development project (Space City)" at various Sy. No's of Hosahudiya, Adiganapalli and Narepalli village, Bagepalli Taluk, Chikkaballapur District-amendment to land acquisition on consent-reg.

Read : 1. Government Order No. CI 281 SPI 2010, dated : 14-07-2010.
2. Proceedings of the 24th State High Level Clearance Committee (SHLCC) Meeting held on 24-01-2011.

In the Order portion of the Government Order No. CI 281 SPI 2010, dated : 14-07-2010, under the infrastructure facility 1. "Land" the words **"to be purchased U/s 109 of KLR Act and conversion of the same"** be replaced by **"to be acquired by KIADB as SUC".**

Other terms and conditions remain the same as in the G.O. read at (1) above.

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce and Industries Department.

P.R. 788

COMMERCE AND INDUSTRIES SECRETARIAT

Sub: The project proposal of M/s. JSW Steel Ltd., for enhancement of installed capacity of "Integrated Steel Plant from 10 Million TPA to 16 Million TPA & to set up 600 MW captive power plant" at Sandur Taluk, Bellary District - approval for additional land-reg.

Read :
1. Government Order No. CI 262 SPI 2009, dated : 29-10-2009.
2. Proceedings of the 24th State High Level Clearance Committee (SHLCC) Meeting held on 24-01-2011.

PREAMBLE :

M/s. JSW Steel Ltd., has been accorded approval for enhancement of installed capacity of "Integrated Steel Plant from 10 Million TPA to 16 Million TPA & to set up 600 MW captive power plant" at 1150 acres of land within the existing factory premises of 8042 acres, in Torangallu Village, Sandur Taluk, Bellary District, with an additional investment of Rs. 15131.70 crores, generating employment to about 6000 persons. Now they have sought an additional land of 839 acres the Gadaginur and Gonhal Villages for creation of impounding reservoir.

In the 24th State High Level Clearance Committee (SHLCC) Meeting held on 24-01-2011, the proposal of the Company has been discussed in detailed and approved.

Government has examined the recommendations made by the State High Level Clearance Committee in its 24th Meeting held on 24-01-2011, in all aspects.

Hence the following order.

GOVERNMENT ORDER NO. CI 262 SPI 2009, BANGALORE, DATED : 11-03-2011.

In the circumstances explained above, Government is pleased to accord approval to the proposal of M/s. JSW Steel Ltd., for creation of an impounding reservoir and acquisition and allotment of additional land of 700 acres at Gadaginur and Gonhal Villages by KIADB as SUC for the above purpose.

Other terms and conditions remain the same as in the G.O. read at (1) above.

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce and Industries Department.

P.R. 789

COMMERCE AND INDUSTRIES SECRETARIAT

Sub: Approval to the project proposal of M/s. JSW Infrastructure Ltd., to establish "Railway Siding and Railway Line" at Bellary District.

Read :
1. Government Order No. CI 221 SPI 2010, dated : 02-06-2010.
2. Proceedings of the 24th State High Level Clearance Committee (SHLCC) Meeting held on 24-01-2011.

PREAMBLE :

M/s. JSW Infrastructure Ltd., has been accorded approval to establish "9 kms length Railway Siding from Daroji Railway Junction to the plant site of M/s JSW Steels Ltd., at Sulthanpur and 8 kms length branch railway line to Sushilnagar Village, from 16.8 km point of the main railway line off Torangallu-Rangithpura", with an investment of Rs. 87 crores, generating employment to about 366 persons.

Now they have requested to transfer the project to M/s . JSW Steel Ltd., from M/s JSW Infrastructure Ltd., to take up the Railway Siding Project.

In the 24th State High Level Clearance Committee (SHLCC) Meeting held on 24-01-2011, the proposal of the Company has been approved.

Government has examined the recommendations made by the State High Level Clearance Committee in the 24th Meeting held on 24-01-2011, in all aspects.

Hence the following Order.

GOVERNMENT ORDER NO. CI 221 SPI 2010, BANGALORE, DATED : 11-03-2011.

Government is pleased to transfer the approval given to M/s JSW Infrastructure Ltd , in favour of M/s JSW Steel Ltd., to establish a 'Railway Siding and Railway Line" and also to include 'Bhujanganagar" to the list of villages mentioned under infrastructure facilities"- "Land"

Other terms and conditions remain the same as in the G.O. read at (1) above.

By Order and in the name of the Governor of Karnataka
A.V. Srinivasa Dikshit
Desk Officer (Technical Cell)
Commerce and Industries Department.

P.R. 790

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮೇ ೧೯, ೨೦೧೧ (ವೈಶಾಖ ೨೯ ಶಕ ವರ್ಷ ೧೯೩೩)	ಸಂಚಿಕೆ ೨೦

ಭಾಗ-೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 30 ಆಖಇ 2011, ಬೆಂಗಳೂರು, ದಿನಾಂಕ:27.04.2011

ಶ್ರೀ ನಜೀಬುಲ್ಲಾ ಖಾನ್, ಸಹಾಯಕ ಖಜಾನಾಧಿಕಾರಿ, ಜಿಲ್ಲಾ ಖಜಾನೆ, ಹಾವೇರಿ ಇವರನ್ನು ಜಿಲ್ಲಾ ಅಧಿಕಾರಿ (ಅಲ್ಪ ಸಂಖ್ಯಾತರು) ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ-ಹುದ್ದೆಗೆ ನೇಮಿಸುವ ಸಲುವಾಗಿ ಇವರ ಸೇವೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವಶಕ್ಕೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.541

ಎಂ.ಎಸ್. ಶಿವರಾಮ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 762 ಎಎಸ್‌ಡಿ 2010, ಬೆಂಗಳೂರು, ದಿನಾಂಕ:26.04.2011

ಶ್ರೀ ಎಸ್.ಎಸ್. ದೊಡ್ಡಮನಿ, ನಿವೃತ್ತ ತಹಶೀಲ್ದಾರ್ ಇವರ ಖಾತೆಯಲ್ಲಿರುವ ಒಟ್ಟು 233 ದಿನಗಳ ಗಳಿಕೆ ರಜೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು, ನಿಯಮ 118 (ಎ)(1) ಹಾಗೂ (4)ರನ್ವಯ ನಗದೀಕರಿಸಲು ಮಂಜೂರಾತಿ ನೀಡಿದೆ.

ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಇರುವುದಿಲ್ಲವೆಂದು ಈ ಮೂಲಕ ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.542

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ತಿದ್ದುಪಡಿ ಸಂಖ್ಯೆ: ಕಂಇ 04 ಎಟಿಎಸ್ 2011, ಬೆಂಗಳೂರು, ದಿನಾಂಕ:29.04.2011

ಸರ್ಕಾರದ ಇದೇ ಸಮ ಸಂಖ್ಯೆಯ ದಿನಾಂಕ:23.04.2011ರ ಅಧಿಸೂಚನೆಯಲ್ಲಿರುವ ಉಡುಪಿ ಎನ್ನುವ ಬದಲಾಗಿ ಹಾವೇರಿ ಹಾಗೂ ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.543

ಆರ್. ಲೀಲಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3)

ಯುವಜನ ಸೇವಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಯುಸೇಇ 93 ಸಮನ 11, ಬೆಂಗಳೂರು, ದಿನಾಂಕ:30.04.2011

ಅಧಿಸೂಚನೆ ಸಂಖ್ಯೆ: ಸಿಆಸುಇ 39 ಆಸೇನಿ 2010, ದಿನಾಂಕ:01.12.2010ರ ಮೇರೆಗೆ ದಿನಾಂಕ:30.04.2011ರ ಅಪರಾಹ್ನ ವಯೋ ನಿವೃತ್ತಿ ಹೊಂದುವ ಶ್ರೀ ಶಿವನಂಜಯ್ಯ ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರ ಸ್ಥಾನದಲ್ಲಿ ಶ್ರೀ ಬಿ.ಎನ್. ಸುರೇಶ್, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು ಇವರನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕ ಹುದ್ದೆಯಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.544

ಸಿ. ಶ್ರೀನಿವಾಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವಜನ ಸೇವಾ ಇಲಾಖೆ.

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 07 ಡಿಜಿಎಂ 2011, ಬೆಂಗಳೂರು, ದಿನಾಂಕ:26.04.2011

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗ್ರೂಪ್-ಎ ಕಿರಿಯ ಶ್ರೇಣಿಯ ಶಿಕ್ಷಣಾಧಿಕಾರಿ ವೃಂದದ ಹುದ್ದೆಗಳಲ್ಲಿ ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳಿಗೆ ಅಧಿಸೂಚನೆ ಸಂಖ್ಯೆ: ಇಡಿ 9 ಡಿಪಿಐ 2007, ದಿನಾಂಕ:24.03.2007ರಂದು ಸ್ಥಾನಪನ್ನ ಬಡ್ತಿಯನ್ನು ನೀಡಲಾಗಿರುತ್ತದೆ. ದಿನಾಂಕ:18.01.2007 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಶ್ರೀ ಜೆ.ಜೆ. ದೊಡ್ಡಮನಿ, ಇವರು ಪದೋನ್ನತಿಗೆ ಅರ್ಹತೆ ಹೊಂದಿದ್ದರೂ ಇವರ ಮೇಲೆ ಶಿಸ್ತು ಕ್ರಮ ಬಾಕಿ ಇದ್ದ ಹಿನ್ನೆಲೆಯಲ್ಲಿ ಬಡ್ತಿಗಾಗಿ ಇವರನ್ನು ಪರಿಗಣಿಸಿರಲಿಲ್ಲ. ಸದರಿಯವರನ್ನು ದಿನಾಂಕ:02.12.2010 ರಂದು ಆಪಾದನೆಗಳಿಂದ ದೋಷಮುಕ್ತಗೊಳಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜೆ.ಜೆ. ದೊಡ್ಡಮನಿ, ಹಿರಿಯ ಉಪನ್ಯಾಸಕರು, ಡಯಟ್, ವಿಜಾಪೂರ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವೇತನ, ಪದೋನ್ನತಿ ಮತ್ತು ವಿಶ್ರಾಂತಿ ವೇತನಗಳ ಪರಿಷ್ಕರಣೆ) ನಿಯಮಗಳು, 1978ರ ನಿಯಮ 2(1)(ಎ) ನಿಯಮದನ್ವಯ ಗ್ರೂಪ್-'ಎ' ಕಿರಿಯ ವೇತನ ಶ್ರೇಣಿ ರೂ.7400-13120 ರಲ್ಲಿ ದಿನಾಂಕ:24.03.2007 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸ್ಥಾನಪನ್ನ ಬಡ್ತಿ ನೀಡಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳದಲ್ಲಿಯೇ ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.545

ಎಸ್.ಹೆಚ್. ಕುರಿಯವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸಮಿತಿಗಳು)

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 194 ಎಸ್‌ಎಸ್‌ಟಿ 2011, ಬೆಂಗಳೂರು, ದಿನಾಂಕ:02.05.2011

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸಾರ್ವತ್ರಿಕ ಚುನಾವಣೆ-2011ರ ಪ್ರಯುಕ್ತ ದಿನಾಂಕ:25.04.2011ರಂದು ನಡೆಯಲಿರುವ ಮತದಾನದ ಸಮಯದಲ್ಲಿ ಕಾನೂನು, ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಸೆಕ್ಟೋರಲ್ ಮ್ಯಾಜಿಸ್ಟ್ರೇಟ್ (ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿ) ನೇಮಿಸುವ ಅಗತ್ಯವಿರುವುದರಿಂದ ದಂಡ ಪ್ರಕ್ರಿಯಾ ಸಂಹಿತೆ 1973 (ಕೇಂದ್ರ ಕಾಯಿದೆ ಸಂಖ್ಯೆ 2-1974)ರ ಕಲಂ 21ರಲ್ಲಿನ ಅಧಿಕಾರವನ್ನು ಚಲಾಯಿಸಿ, ಸದರಿ ಸಂಹಿತೆಯಡಿ ನೀಡಬಹುದಾದ ಎಲ್ಲಾ ಅಧಿಕಾರಗಳನ್ನು ನೀಡಿ, ಈ ಕೆಳಕಂಡ ಪಟ್ಟಿಯ ಕಲಂ (2)ರಲ್ಲಿ ನಮೂದಿಸಿರುವ ಹುದ್ದೆಯ ಅಧಿಕಾರಿಗಳನ್ನು ಸೆಕ್ಟರಲ್ ಮ್ಯಾಜಿಸ್ಟ್ರೇಟರುಗಳನ್ನಾಗಿ (ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿ) ಕಲಂ (3)ರಲ್ಲಿ ನಮೂದಿಸಿರುವ ಕ್ಷೇತ್ರವ್ಯಾಪ್ತಿಗೆ ಈ ಕೂಡಲೇ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪದನಾಮ	ಕ್ಷೇತ್ರ ವ್ಯಾಪ್ತಿ (ತಾಲ್ಲೂಕುವಾರು)
1.	ಶ್ರೀ ಎಸ್. ಸತೀಶ್, ಅಧೀನ ಕಾರ್ಯದರ್ಶಿಗಳು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ	ಭದ್ರಾವತಿ
2.	ಶ್ರೀ ಬಾಲ್ಯಾನಾಯ್ಕ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಶಿವಮೊಗ್ಗ.	ಭದ್ರಾವತಿ
3.	ಶ್ರೀ ಯು. ಚಂದ್ರಾನಾಯ್ಕ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಶಿವಮೊಗ್ಗ	ಭದ್ರಾವತಿ
4.	ಶ್ರೀ ಕೆ.ಎಲ್. ಸುಬ್ರಹ್ಮಣ್ಯ, ಸಹಾಯಕ ಕಾರ್ಯದರ್ಶಿಗಳು-1, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ.	ಭದ್ರಾವತಿ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಶಿವಮೊಗ್ಗ ಜಿಲ್ಲೆರವರು ಹೊರಡಿಸಿರುವ ಆದೇಶ ಸಂಖ್ಯೆ: ಎಂಎಜಿ(1) ವಿವ 02/2011-12, ದಿನಾಂಕ:28.04.2011ಕ್ಕೆ ಸರ್ಕಾರದ ಘಟನೋತ್ತರ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ , ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್.546

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 64 ಪೊಸಿಪ 2010, ಬೆಂಗಳೂರು, ದಿನಾಂಕ:29.04.2011

ಪೊಲೀಸ್ ಇಲಾಖೆಯ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ವೈಜ್ಞಾನಿಕ ಅಧಿಕಾರಿ, ವಿಷ ವಿಜ್ಞಾನ ವಿಭಾಗದ ಒಟ್ಟು 02 ಹುದ್ದೆಗಳ ನೇಮಕಾತಿ ಬಗ್ಗೆ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ) ಸಾಮಾನ್ಯ ನಿಯಮಗಳು, 2001 ರಡಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಅಭ್ಯರ್ಥಿಗಳು ಸದರಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮ ಆಯ್ಕೆ ಪಟ್ಟಿಗಳನ್ನು ಆಯೋಗದ ಅಧಿಸೂಚನೆ ಸಂಖ್ಯೆ: PSC/18/RTB/2005 ದಿನಾಂಕ:30.06.2010ರಲ್ಲಿ ಪ್ರಕಟಿಸಲಾಗಿದ್ದು, ಈ ಕೆಳಕಂಡ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಮೀಸಲಾತಿ ವರ್ಗ
1.	PRAVEEN UMESH SANGANALMATH TOXICOLOGY SECTION FORENSIC SCIENCE LABORATORY, POLICE DEPT. MADIVALA, BANGALORE-560 068	GM
2.	SUJATHA K.M. SCIENTIFIC ASST. FORENSIC SCIENCE LABORATORY, MADIVALA, BANGALORE-560 068.	SC

ಮೇಲ್ಕಂಡ ಅಭ್ಯರ್ಥಿಗಳನ್ನು ರೂ.11400-21600ರ ವೇತನ ಶ್ರೇಣಿಯ ವೈಜ್ಞಾನಿಕ ಅಧಿಕಾರಿ, ವಿಷ ವಿಜ್ಞಾನ ವಿಭಾಗದ ಹುದ್ದೆಗೆ ಪರಿವೀಕ್ಷಣೆಯ ಮೇಲೆ (on probation) ಈ ಮೂಲಕ ನೇಮಕ ಮಾಡಲಾಗಿದೆ.

ಈ ಅಭ್ಯರ್ಥಿಗಳ ನೇಮಕಾತಿ ಮತ್ತು ಸೇವಾ ನಿಯಮಗಳು ಈ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಹಾಗೂ ಮುಂದೆ ಹೊರಡಿಸಬಹುದಾದ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟಿರುತ್ತದೆ.

ಈ ಪರೀಕ್ಷಾರ್ಥಿಗಳ ಪರೀಕ್ಷಾರ್ಥ ಅವಧಿಯು ಎರಡು ವರ್ಷಗಳಾಗಿರುತ್ತವೆ. ಈ ಅವಧಿಯಲ್ಲಿ ಪರೀಕ್ಷಾರ್ಥಿಗಳು ವೈಜ್ಞಾನಿಕ ಅಧಿಕಾರಿ, ವಿಷ ವಿಜ್ಞಾನ ವಿಭಾಗದ ಹುದ್ದೆಗೆ ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು ಮತ್ತು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸತಕ್ಕದ್ದು.

ಈ ಅಧಿಸೂಚನೆಯನ್ನು ನೋಂದಾಯಿತ ಅಂಚೆ ಮುಖಾಂತರ ರವಾನಿಸಿದ ದಿನಾಂಕದಿಂದ 15 ದಿನಗಳೊಳಗೆ ಅಭ್ಯರ್ಥಿಯು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001 ಇವರ ಮುಂದೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಗೊಳಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.547

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 18 ಆಸೇಇ 2011, ಬೆಂಗಳೂರು, ದಿನಾಂಕ:29.04.2011

ಅಧಿಸೂಚನೆ ಸಂಖ್ಯೆ: ಸಿಆಸುಇ 13 ಆಸೇವ 2008 ದಿನಾಂಕ:24.05.2008ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ) ನಿಯಮಾವಳಿಗಳು 1997 ರ ಅಡಿಯಲ್ಲಿ 2006ನೇ ಬ್ಯಾಚ್‌ನ ಕೆ.ಎ.ಎಸ್. ಗ್ರೂಪ್-ಎ ಕಿರಿಯ ಶ್ರೇಣಿ ಹುದ್ದೆಗೆ ನೇಮಕಗೊಂಡ ಕೆಳಕಂಡ 20 ಪರೀಕ್ಷಾರ್ಥ ಅಧಿಕಾರಿಗಳು 2 ವರ್ಷದ ಪರೀಕ್ಷಾರ್ಥ ಅವಧಿಯನ್ನು ಅವರುಗಳ ಹೆಸರಿನ

ಮುಂದೆ ಸೂಚಿಸಿರುವ ದಿನಾಂಕಗಳಂದು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5(1)(ಎ) ರ ಪ್ರಕಾರ ಘೋಷಿಸಲಾಗಿದೆ.

ಕ್ರ ಸಂ.	ಅಧಿಕಾರಿಯ ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ	ಕೆ.ಎ.ಎಸ್. (ಕಿರಿಯ ಶ್ರೇಣಿ) ವೃಂದಕ್ಕೆ ಹಾಜರಾದ ದಿನಾಂಕ	2 ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಪೂರೈಸಿದ ದಿನಾಂಕ
1.	ಚಂದ್ರಶೇಖರ್ ಎನ್. ಆಡಳಿತಾಧಿಕಾರಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.	24.05.2008 (ಪೂರ್ವಾಹ್ನ)	23.05.2010
2.	ಸುರೇಶ್ ಬಿ. ಇಟ್ನಾಳ್ ವಿಶೇಷ ಭೂಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ರಾಣೆಬೆನ್ನೂರು, ಹಾವೇರಿ ಜಿಲ್ಲೆ.	30.05.2008 (ಅಪರಾಹ್ನ)	30.05.2010
3.	ಪ್ರಭು ಜಿ. ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ, ಮಂಡ್ಯ ಜಿಲ್ಲೆ.	30.05.2008 (ಅಪರಾಹ್ನ)	30.05.2010
4.	ಡಾ: ಕೆ.ಎನ್. ಅನುರಾಧ, ಉಪವಿಭಾಗಾಧಿಕಾರಿ, ಭಟ್ಕಳ ಉಪವಿಭಾಗ, ಭಟ್ಕಳ, ಉತ್ತರ ಕನ್ನಡ ಜಿಲ್ಲೆ	30.05.2008 (ಅಪರಾಹ್ನ)	30.05.2010
5.	ನಾಗರಾಜ ಎನ್.ಎಂ. ಉಪವಿಭಾಗಾಧಿಕಾರಿ, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ	03.06.2008 (ಪೂರ್ವಾಹ್ನ)	02.06.2010
6.	ಬಸವರಾಜು ಎ.ಬಿ. ಉಪವಿಭಾಗಾಧಿಕಾರಿ, ಕೊಳ್ಳೆಗಾಲ ಉಪವಿಭಾಗ, ಕೊಳ್ಳೆಗಾಲ, ಚಾಮರಾಜನಗರ ಜಿಲ್ಲೆ.	30.05.2008 (ಅಪರಾಹ್ನ)	30.05.2010
7.	ರೂಪಾ ಐ.ಪಿ. ಆಡಳಿತಾಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.	30.05.2008 (ಅಪರಾಹ್ನ)	30.05.2010
8.	ಎಂ. ಶಿಲ್ಪ ಆಡಳಿತಾಧಿಕಾರಿ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕರ್ನಾಟಕ ಭೂಸೇನಾ ನಿಗಮ), ಬೆಂಗಳೂರು	26.05.2008 (ಪೂರ್ವಾಹ್ನ)	25.05.2010
9.	ನವೀನ್ ಕುಮಾರ್ ರಾಜು ಎಸ್. ಉಪವಿಭಾಗಾಧಿಕಾರಿ, ಕುಮಟಾ ಉಪವಿಭಾಗ, ಕುಮಟಾ, ಉತ್ತರ ಕನ್ನಡ ಜಿಲ್ಲೆ,	06.06.2008 (ಪೂರ್ವಾಹ್ನ)	05.06.2010
10.	ಡಾ: ಮಹೇಶ್ ಎಂ. ಉಪಕಾರ್ಯದರ್ಶಿ-2 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	07.06.2008 (ಪೂರ್ವಾಹ್ನ)	06.06.2010
11.	ಸೋಮಶೇಖರ್ ಎಸ್.ಜಿ. ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಬೆಂಗಳೂರು	26.05.2008 (ಪೂರ್ವಾಹ್ನ)	25.05.2010
12.	ಡಾ: ವಾಸಂತಿ ಅಮರ್ ಬಿ.ವಿ., ಯೋಜನಾ ವ್ಯವಸ್ಥಾಪಕರು (ಅಭಿವೃದ್ಧಿ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು	24.05.2008 (ಪೂರ್ವಾಹ್ನ)	23.05.2010
13.	ಲಿಂಗಮೂರ್ತಿ ಜಿ. ಉಪವಿಭಾಗಾಧಿಕಾರಿ, ಹುಣಸೂರು ಉಪವಿಭಾಗ, ಹುಣಸೂರು, ಮೈಸೂರು ಜಿಲ್ಲೆ.	24.05.2008 (ಪೂರ್ವಾಹ್ನ)	23.05.2010
14.	ರಂಗಪ್ಪ ಎಸ್. ಉಪವಿಭಾಗಾಧಿಕಾರಿ, ಮಂಡ್ಯ ಉಪವಿಭಾಗ, ಮಂಡ್ಯ	31.05.2008 (ಪೂರ್ವಾಹ್ನ)	30.05.2010

ಕ್ರ. ಸಂ.	ಅಧಿಕಾರಿಯ ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ	ಕೆ.ಎ.ಎಸ್. (ಕಿರಿಯ ಶ್ರೇಣಿ) ವೃಂದಕ್ಕೆ ಹಾಜರಾದ ದಿನಾಂಕ	2 ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಪೂರೈಸಿದ ದಿನಾಂಕ
15.	ಪ್ರಸನ್ನ ಹೆಚ್. ಉಪವಿಭಾಗಾಧಿಕಾರಿ, ಬಸವಕಲ್ಯಾಣ ಉಪವಿಭಾಗ, ಬಸವಕಲ್ಯಾಣ, ಬೀದರ್ ಜಿಲ್ಲೆ.	24.05.2008 (ಪೂರ್ವಾಹ್ನ)	23.05.2010
16.	ಇಬ್ರಾಹಿಂ ಮೈಗೂರ್, ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ಬೆಂಗಳೂರು.	30.05.2008 (ಅಪರಾಹ್ನ)	30.05.2010
17.	ಪದ್ಮ ಬಸವಂತಪ್ಪ ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ಗೃಹ ಮಂಡಳಿ, ಹುಬ್ಬಳ್ಳಿ	06.06.2008 (ಪೂರ್ವಾಹ್ನ)	05.06.2010
18.	ಶಶಿಧರ್ ಕುರೇರ, ಉಪವಿಭಾಗಾಧಿಕಾರಿ, ತರೀಕೆರೆ, ಉಪವಿಭಾಗ, ಚಿಕ್ಕಮಗಳೂರು ಜಿಲ್ಲೆ.	31.05.2008 (ಪೂರ್ವಾಹ್ನ)	30.05.2010
19.	ಸದಾಶಿವ ಪ್ರಭು ಬಿ. ಉಪವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ, ಕುಂದಾಪುರ, ಉಡುಪಿ ಜಿಲ್ಲೆ.	04.06.2008 (ಪೂರ್ವಾಹ್ನ)	03.06.2010
20.	ಪ್ರಕಾಶ್ ಜಿ.ಟಿ. ನಿಟ್ಟಾಲಿ ವಿಶೇಷ ಭೂಸ್ವಾಧೀನಾಧಿಕಾರಿ, ಹಿಪ್ಪರಗಿ (ಯೋಜನೆ (ಆರ್ & ಆರ್), ಅಥಣಿ, ಬೆಳಗಾಂ ಜಿಲ್ಲೆ.	31.05.2008 (ಪೂರ್ವಾಹ್ನ)	30.05.2010

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ
ಪಿ.ಆರ್.548 ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 67 ಎಸ್ಐಎಸ್ 2011, ಬೆಂಗಳೂರು, ದಿನಾಂಕ:04.05.2011

ಇದೇ ಸಮಸಂಖ್ಯೆಯ ದಿನಾಂಕ:06.04.2011ರ ಅಧಿಸೂಚನೆಯಲ್ಲಿ ಶ್ರೀ ಸುಭೋದ್ ಯಾದವ್, ಭಾ.ಆ.ಸೇ., ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಪ್ರಸಕ್ತ 2010-11ನೇ ಬ್ಲಾಕ್ ಅವಧಿಯಲ್ಲಿ ಅವರ ಸ್ವಗ್ರಾಮವಾದ ಕಾನ್ಪುರ್ (ಉತ್ತರ ಪ್ರದೇಶ)ಗೆ ಹೋಗಿ-ಬರಲು ಸ್ವಗ್ರಾಮ ಪ್ರಯಾಣ ರಿಯಾಯಿತಿಯನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದ್ದು, ಈ ಸಂಬಂಧ ಸದರಿಯವರಿಗೆ ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: O.M.F.No. 14028/4/2009 (Estt.(L). ಹಾಗೂ 11019/24/2005-AIS-III, ದಿನಾಂಕ:03.11.2009ರ ಪತ್ರದಲ್ಲಿ ನೀಡಿರುವ ಸ್ಪಷ್ಟನೆ ಹಿನ್ನೆಲೆಯಲ್ಲಿ 10 ದಿನಗಳ ಗಳಿಕೆ ರಜೆಯ ನಗದೀಕರಣ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಸಹ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಶ್ರೀನಿವಾಸ ಮೂರ್ತಿ
ಪಿ.ಆರ್.549 ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 275 ಆಸೇವ 10, ಬೆಂಗಳೂರು, ದಿನಾಂಕ:04.05.2011

ಶ್ರೀ ಜಿ.ಬಿ. ಹಿರೇಮಣಿಯವರ್ ನಿವೃತ್ತ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ ಇವರನ್ನು ಮಾನ್ಯ ಸಮಾಜ ಕಲ್ಯಾಣ, ಬಂದೀಖಾನೆ ಸಚಿವರ ಆಪ್ತ ಕಾರ್ಯದರ್ಶಿಯಾಗಿ ಗುತ್ತಿಗೆ ಆಧಾರದ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಥವಾ ಮಾನ್ಯ ಸಮಾಜ ಕಲ್ಯಾಣ, ಬಂದೀಖಾನೆ ಸಚಿವರ ಪದಾವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977ರ ನಿಯಮ 15(1)(ಬಿ) (iii) ರನ್ವಯ ನೇಮಿಸಲಾಗಿದೆ.

ಶ್ರೀ ಜಿ.ಬಿ. ಹಿರೇಮಣಿಯವರ್ ಇವರ ಗುತ್ತಿಗೆ ನೇಮಕಾತಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ
ಪಿ.ಆರ್.550 ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಸಿಆಸುಇ 88 ಸೇಲೋಯು 2011, ಬೆಂಗಳೂರು, ದಿನಾಂಕ:05.05.2011

ಶ್ರೀ ಎಸ್.ವಿ.ಎಂ. ಷಾಖಾದ್ರಿ, ಕಾರ್ಯಪಾಲಕ ಇಂಜನಿಯರ್ ಇವರ ಸೇವೆಯನ್ನು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇಲ್ಲಿ ಖಾಲಿ ಇರುವ ಕಾರ್ಯಪಾಲಕ ಇಂಜನಿಯರ್ ಹುದ್ದೆಗೆ ಮರು ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ ಸಮಸಂಖ್ಯೆಯ ಅಧಿಸೂಚನೆಯನ್ನು ದಿನಾಂಕ:30.04.2011 ರಂದು ಹೊರಡಿಸಲಾಗಿದೆ. ಈ ಅಧಿಸೂಚನೆಯ 7ನೇ ಸಾಲಿನಲ್ಲಿರುವ 'ಸಹಾಯಕ ಕಾರ್ಯಪಾಲಕ' ಎಂಬುದನ್ನು 'ಕಾರ್ಯಪಾಲಕ' ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ. ಮಾರ್ಕಂಡೇಯ

ಪಿ.ಆರ್.551

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 671 SAS 2010, Bangalore, Dated 4th May, 2011

Sri K.P. Mohan Raj, IAS (KN 2007), Assistant Commissioner, Savanur Sub-Division, Savanur is promoted to officiate in the Senior Time Scale of IAS carrying the pay scale of Rs.15600-39100 plus Grade Pay of Rs.6600/- with immediate effect and continued until further orders as Senior Assistant Commissioner, Savanur Sub-Division, Savanur.

By Order and in the Name of the Governor of Karnataka,

N. SRINIVASA MURTHY

PR-552

Under Secretary to Government,

D.P. & A.R. (Services-I)

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 59 ಸಮನ್ವಯ 2011, ಬೆಂಗಳೂರು, ದಿನಾಂಕ:28.04.2011

ಡಾ: ರಾಜು, ಭಾ.ಅ.ಸೇ. ಪ್ರಧಾನ ವ್ಯವಸ್ಥಾಪಕರು, ಕ್ರೆಡಲ್ ಇವರನ್ನು ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್ಎಫ್‌ಪಿ 2011 ದಿನಾಂಕ:26.04.2011ರನ್ವಯ ಬನ್ನೇರುಘಟ್ಟ ಜೈವಿಕ ಉದ್ಯಾನ ವನಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ಆದ್ದರಿಂದ ಡಾ: ರಾಜು, ಭಾ.ಅ.ಸೇ., ಪ್ರಧಾನ ವ್ಯವಸ್ಥಾಪಕರು, ಕ್ರೆಡಲ್ ಇವರನ್ನು ಕ್ರೆಡಲ್‌ನ ಪ್ರಧಾನ ವ್ಯವಸ್ಥಾಪಕರ ಹುದ್ದೆಯ ಕರ್ತವ್ಯದಿಂದ ದಿನಾಂಕ:28.04.2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲಾಗಿದೆ. ಸದರಿ ಅಧಿಕಾರಿಯವರು ತಮ್ಮ ಕರ್ತವ್ಯದ ಪ್ರಭಾರವನ್ನು ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರಿಗೆ ವಹಿಸಬೇಕೆಂದು ನಿರ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಪಿ.ಆರ್.553

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 20 ಸಮನ್ವಯ 2011 (ಭಾಗ), ಬೆಂಗಳೂರು, ದಿನಾಂಕ:02.05.2011

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 449 ಸಅಸೇ 2010, ದಿನಾಂಕ:06.04.2011ರಲ್ಲಿ ಶ್ರೀ ಎಚ್.ಆರ್. ನಾಗೇಂದ್ರ, ಸರ್ಕಾರದ ಉಪ ಕಾರ್ಯದರ್ಶಿ, ಇವರನ್ನು ಇಂಧನ ಇಲಾಖೆಯ ಶ್ರೀಮತಿ ಪಾರ್ವತಿ ಕೇಶವಾಚಾರ್‌ರವರ ವರ್ಗಾವಣೆಯಿಂದ ತೆರವಾದ ಜಾಗಕ್ಕೆ ನೇಮಿಸಲಾಗಿರುತ್ತದೆ. ಅದರಂತೆ, ಶ್ರೀಯುತರು ದಿನಾಂಕ:11.04.2011ರಂದು ಈ ಹುದ್ದೆಯ ಕಾರ್ಯಭಾರ ವಹಿಸಿಕೊಂಡಿದ್ದಾರೆ.

ತತ್ಸಂಬಂಧ, ಶ್ರೀ ಎಚ್.ಆರ್. ನಾಗೇಂದ್ರ, ಸರ್ಕಾರದ ಉಪ ಕಾರ್ಯದರ್ಶಿ ಇವರನ್ನು ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಕಲಂ 74(ಎ) ಮತ್ತು 74(ಬಿ) ರನ್ವಯ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ ಇವುಗಳ ಹಾಗೂ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಕಲಂ 72(ಎ) ಮತ್ತು 72(ಬಿ) ರನ್ವಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇವರ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇದರ ಮೆಮೊರ್‍ಯಾಂಡಂಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 51(ಎ) ರನ್ವಯ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್.554

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 420 ಎಎಸ್‌ಡಿ 2010, ಬೆಂಗಳೂರು, ದಿನಾಂಕ:02.05.2011

ಶ್ರೀ ಸಿ. ಪ್ರಕಾಶನ್, ನಿವೃತ್ತ ತಹಶೀಲ್ದಾರ್ ಗ್ರೇಡ್-2 (ಜೇಷ್ಠತಾ ಸಂಖ್ಯೆ: 3656) ಇವರಿಗಿಂತ ಜೇಷ್ಠತೆಯಲ್ಲಿ ಕಿರಿಯರಾದ ಶ್ರೀ ಎಸ್.ಕೆ. ಪಾಟೀಲ್, ತಹಶೀಲ್ದಾರ್ ಗ್ರೇಡ್-2 (ಜೇಷ್ಠತಾ ಸಂಖ್ಯೆ:3658) ಇವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 308 ಎಎಸ್‌ಡಿ 2007 ದಿನಾಂಕ:24.12.2007ರಲ್ಲಿ ತಹಶೀಲ್ದಾರ್ ಗ್ರೇಡ್-2 ವೃಂದದಿಂದ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ಮುಂಬಡ್ತಿ ನೀಡಿರುವುದರಿಂದ, ಶ್ರೀ ಸಿ.ಪ್ರಕಾಶನ್, ನಿವೃತ್ತ ತಹಶೀಲ್ದಾರ್ ಗ್ರೇಡ್-2 (ಜೇಷ್ಠತಾ ಸಂಖ್ಯೆ:3656) ಇವರಿಗೂ ಸಹ ತಹಶೀಲ್ದಾರ್ ಗ್ರೇಡ್-2 ವೃಂದದಿಂದ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ದಿನಾಂಕ:24.12.2007 ರಿಂದ ಜಾರಿಗೆ ಬರುವಂತೆ, ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.ಪಿ.) ನಿಯಮಾವಳಿಗಳು 1978ರ ನಿಯಮ 2(1)(ಎ)ರಡಿಯಲ್ಲಿ ಪೂರ್ವಾನ್ವಯವಾಗಿ ಬಡ್ತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್.555

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 16 ಎಟಿಎಸ್ 2011, ಬೆಂಗಳೂರು, ದಿನಾಂಕ:03.05.2011

ಕಂದಾಯ ಇಲಾಖೆಯ ತಹಶೀಲ್ದಾರ್ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶಿವಪ್ಪ ಲಮಾಣಿ, ತಹಶೀಲ್ದಾರ್, ಸಂಡೂರು ತಾಲ್ಲೂಕು ಇವರನ್ನು ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ಈ ಕೂಡಲೇ ಜಾರಿಗೆ ಬರುವಂತೆ ವರ್ಗಾಯಿಸಲಾಗಿದೆ.

ಸದರಿ ಅಧಿಕಾರಿಯು ಸಂಡೂರು ತಾಲ್ಲೂಕಿನಿಂದ ಕೂಡಲೇ ಬಿಡುಗಡೆಗೊಂಡು ಸರ್ಕಾರದಲ್ಲಿ ವರದಿ ಮಾಡಿಕೊಳ್ಳುವುದು.

"ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ವರ್ಗಾವಣೆ ಹೊಂದಿದ ತಹಶೀಲ್ದಾರ್‌ರವರನ್ನು ಈ ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡುವುದು".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್.556

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 12 ಡಿಪಿಐ 2011, ಬೆಂಗಳೂರು, ದಿನಾಂಕ:02.05.2011

ಸಾರ್ವಜನಿಕ ಶಿಕ್ಷಣ ಇಲಾಖೆಯ, ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದ ಗ್ರೂಪ್-'ಎ' ಕಿರಿಯ ವೇತನ ಶ್ರೇಣಿಯ ಈ ಕೆಳಕಂಡ ಅಧಿಕಾರಿಗಳಿಗೆ ರೂ.18150-26925ರ ಗ್ರೂಪ್-'ಎ' ಹಿರಿಯ ವೇತನ ಶ್ರೇಣಿಯ ಉಪ ನಿರ್ದೇಶಕರು ಹಾಗೂ ತತ್ಸಮಾನ ವೃಂದದ ಹುದ್ದೆಗೆ, ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಸೂಚಿಸಲಾಗಿರುವ ಹುದ್ದೆ ಮತ್ತು ಸ್ಥಳಗಳಿಗೆ ನಿಯುಕ್ತಿಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ಬಡ್ತಿ ಮೂಲಕ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆ ಮತ್ತು ಸ್ಥಳ
1.	ಶ್ರೀ ಎಂ.ಡಿ. ಬಳ್ಳಾರಿ ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಸವಣೂರು, ಹಾವೇರಿ ಜಿಲ್ಲೆ.	ಉಪ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ (ಶ್ರೀಮತಿ ಪಿ.ಪದ್ಮಮ್ಮ, ಇವರ ಅಮಾನತ್ತಿನಿಂದ ತೆರವಾದ ಸ್ಥಳಕ್ಕೆ)

ಕ್ರಮ ಸಂಖ್ಯೆ	ಹೆಸರು ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ಬಡ್ತಿ ಮೂಲಕ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆ ಮತ್ತು ಸ್ಥಳ
2.	ಶ್ರೀ ಬಿ.ಕೆ. ಬಸವರಾಜು, ಶಿಕ್ಷಣಾಧಿಕಾರಿ (ನಿಯೋಜನೆ) ಎ.ಎನ್.ಎಸ್.ಐ.ಆರ್.ಡಿ. ಮೈಸೂರು.	ಇವರ ಸೇವೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಿಂದಕ್ಕೆ ಪಡೆಯಲಾಗಿದೆ.
3.	ಶ್ರೀ ನಾಗೇಂದ್ರ ಎಸ್. ಮದ್ಯಸ್ಥ, ಶಿಕ್ಷಣಾಧಿಕಾರಿ, ಮಧ್ಯಾಹ್ನ ಉಪಾಹಾರ ಯೋಜನೆ, ಜಿಲ್ಲಾ ಪಂಚಾಯತ್, ಉಡುಪಿ.	ಹಿರಿಯ ಕಾರ್ಯಕ್ರಮಾಧಿಕಾರಿ, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು (ಖಾಲಿ ಹುದ್ದೆ)
4.	ಶ್ರೀ ಎನ್.ಎಸ್. ಕುಮಾರ್, ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.	ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ದಾವಣಗೆರೆ (ಖಾಲಿ ಹುದ್ದೆ)
5.	ಶ್ರೀ ಎ.ಮಲ್ಲಶೆಟ್ಟಿ, ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಯರಮರಸ್, ರಾಯಚೂರು ಜಿಲ್ಲೆ.	ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು (ಖಾಲಿ ಹುದ್ದೆ)
6.	ಶ್ರೀ ಹೆಚ್.ಡಿ. ಗೋವಿಂದಯ್ಯ, ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, (ಶ್ರೀ ಪ್ರಹ್ಲಾದಗೌಡ, ಇವರ ವರ್ಗಾವಣೆಯಿಂದ ತೆರವಾದ ಸ್ಥಳಕ್ಕೆ)

ಕ್ರಮ ಸಂಖ್ಯೆ: 2 ರಲ್ಲಿರುವ ಶ್ರೀ ಬಿ.ಕೆ. ಬಸವರಾಜು, ಇವರಿಗೆ ಪ್ರತ್ಯೇಕ ಸ್ಥಳ ನಿಯುಕ್ತಿ ಆದೇಶ ಹೊರಡಿಸಲಾಗುವುದು. ಸದರಿಯವರು ಸ್ಥಳ ನಿಯುಕ್ತಿಗಾಗಿ ಸರ್ಕಾರದಲ್ಲಿ ವರದಿ ಮಾಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ

ಪಿ.ಆರ್.557

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ, (ಆಡಳಿತ)

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 213 ಡಿಪಿಐ 2009, ಬೆಂಗಳೂರು, ದಿನಾಂಕ:03.05.2011

ಸಾರ್ವಜನಿಕ ಶಿಕ್ಷಣ ಇಲಾಖೆಯ, ಉಪ ನಿರ್ದೇಶಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಯಾದ ಶ್ರೀ ಜಿ. ಭೀಮಣ್ಣ, ಹಿರಿಯ ಕಾರ್ಯಕ್ರಮಾಧಿಕಾರಿ, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು ಇವರಿಗೆ ರೂ.18150-26925ರ ವೇತನ ಶ್ರೇಣಿಯ ಉಪ ನಿರ್ದೇಶಕರ ಹುದ್ದೆಯಲ್ಲಿ ಇವರಿಗಿಂತ ಸೇವೆಯಲ್ಲಿ ಕಿರಿಯರಾದ ಶ್ರೀ ಪುಟ್ಟಸ್ವಾಮಿ, ಇವರಿಗೆ ಪದೋನ್ನತಿ ನೀಡಿದ ದಿನಾಂಕ:01.09.2008 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ. & ಪಿ) ನಿಯಮಾವಳಿಗಳ ನಿಯಮ 2(1)(ಎ) ರನ್ವಯ ಉಪ ನಿರ್ದೇಶಕರು ಹಾಗೂ ತತ್ಸಮಾನ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ

ಪಿ.ಆರ್.558

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ, (ಆಡಳಿತ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಕುಕ 166 ಪಿಐಎಂ 2011, ಬೆಂಗಳೂರು, ದಿನಾಂಕ:28.04.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 305 ಪಿಐಎಂ 2010, ದಿನಾಂಕ:18.11.2010ರ ಕ್ರ.ಸಂ. (3)ರಲ್ಲಿ 'ಡಾ: ಎಸ್.ಆರ್. ನಾಗರತ್ನ, ಜಿಲ್ಲಾ ಆಯುಷ್ ಅಧಿಕಾರಿಗಳು, ದಾವಣಗೆರೆ ಇವರ ಜನ್ಮ ದಿನಾಂಕ:19.04.1951 ಹಾಗೂ ವಯೋನಿವೃತ್ತಿ ಹೊಂದಲಿರುವ ದಿನಾಂಕ:30.04.2011' ಎಂದು ನಮೂದಿತವಾಗಿರುವುದನ್ನು ಮಾರ್ಪಡಿಸಿದೆ ಮತ್ತು ಸದರಿ ದಿನಾಂಕಗಳ ಬದಲಾಗಿ ಸದರಿಯವರ "ಜನ್ಮ ದಿನಾಂಕ:19.05.1951 ಎಂದು ಮತ್ತು ವಯೋನಿವೃತ್ತಿ ಹೊಂದಲಿರುವ ದಿನಾಂಕ:31.05.2011" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಇನ್ನುಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಇಟಗಿ

ಪಿ.ಆರ್.559

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮೇ ೧೯, ೨೦೧೧ (ವೈಶಾಖ ೨೯ ಶಕ ವರ್ಷ ೧೯೩೩)	ಸಂಚಿಕೆ ೨೦

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

KARNATAKA ELECTRICITY REGULATORY COMMISSION

No.9/2, 6th & 7th Floor, Mahalakshmi Chambers, M.G.Road, Bangalore-560 001

NOTIFICATION

No.T/11/10166 Dated 16th May ,2011

In exercise of the powers conferred under the Section 55 of the Electricity Act, 2003,the Karnataka Electricity Regulatory Commission hereby extend the time limit for metering of the traffic signal light installations in the City of Bangalore up to 30-04-2012.The supply and billing after 30-04-2012 shall be based on meter reading.

By Order of the Commission

PD-61

T.A.Parthasarathy

Secretary

Karnataka Electricity Regulatory Commission

ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಚಾಮರಾಜಪೇಟೆ ಬೆಂಗಳೂರು-560018

ದಾವಾ ಸಂಖ್ಯೆ: ಜೆ.ಆರ್.ಬಿ./ಎಂ.ಡಿ./71/2010-11

ಅರ್ಜಿದಾರರು:

ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು
ರಾಮನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ಬೆಂಗಳೂರು-ಇದರ ವ್ಯವಸ್ಥಾಪಕ ನಿರ್ದೇಶಕರು

ಪ್ರತಿವಾದಿಗಳು:

1) ಶ್ರೀ ಜಿ.ಡಿ.ಚನ್ನಗಿರಿಯಪ್ಪ ಬಿನ್ ದಿ.ಗುರಿಕಾರ ದಾಸಪ್ಪ,
(ಕಾರ್ಯದರ್ಶಿ) (ಹಾಲಿ ಅಮಾನತ್ತಿಲ್ಲಿರುವವರು)
ಟಿ. ಹೊಸಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ.,
ಹೊಸಹಳ್ಳಿ, ಕನಕಪುರ ತಾಲ್ಲೂಕು,ರಾಮನಗರ ಜಿಲ್ಲೆ.

ಮನೆಯ ವಿಳಾಸ:
ಗುರಿಕಾರ ನಿಲಯ,
ಪೈಪ್ ಲೈನ್ ರಸ್ತೆ, ಬಸವೇಶ್ವರನಗರ
ಕನಕಪುರ, ರಾಮನಗರ ಜಿಲ್ಲೆ

2) **ಶ್ರೀ ಹೆಚ್. ಕೃಷ್ಣ** ಬಿನ್ ಜಿ. ಹೊನ್ನಯ್ಯ,
ಮೇಜರ್, ಮಾಜಿ ಪ್ರಭಾರ ಶಾಖಾ ವ್ಯವಸ್ಥಾಪಕರು,
ಬಿಬಿಆರ್ ಮತ್ತು ಆರ್‌ಡಿಸಿಸಿ ಬ್ಯಾಂಕ್ ನಿ.,
ಕನಕಪುರ ಶಾಖೆ, ಕನಕಪುರ,
ರಾಮನಗರ ಜಿಲ್ಲೆ

ಮನೆಯ ವಿಳಾಸ:
ಕಾಲಭೈರವೇಶ್ವರ ನಿಲಯ,
ರಂಗನಾಥ ಬಡಾವಣೆ,
ಕನಕಪುರ, ರಾಮನಗರ ಜಿಲ್ಲೆ.

3) **ಶ್ರೀ ಕೆ.ಎನ್.ಸ್ವಾಮಿ ಗೌಡ** ಬಿನ್ ನಿಂಗಪ್ಪ,
ಮೇಜರ್, ಮಾಜಿ ಮೇಲ್ವಿಚಾರಕರು,
ಬಿಬಿಆರ್ ಮತ್ತು ಆರ್‌ಡಿಸಿಸಿ ಬ್ಯಾಂಕ್ ನಿ.,
ಕನಕಪುರ ಶಾಖೆ, ಕನಕಪುರ,ರಾಮನಗರ ಜಿಲ್ಲೆ.

ಮನೆಯ ವಿಳಾಸ:
ಮನೆ ನಂ.77, ಕೇರಾಫ್ ಕರಿಯಪ್ಪ ಬಿಲ್ಡಿಂಗ್,
ಎ.ವಿ.ಆರ್. ರಸ್ತೆ, ಕನಕಪುರ,
ರಾಮನಗರ ಜಿಲ್ಲೆ.

4) **ಶ್ರೀ ಬಿ.ಕೆ. ಪುಟ್ಟರಾಮಯ್ಯ** ಬಿನ್ ದಿ. ಬಿ.ಎಂ. ಕೆಂಪಯ್ಯ,
59 ವರ್ಷ, ಮಾಜಿ ವ್ಯವಸ್ಥಾಪಕರು,
ಸಾಲ ಮತ್ತು ಮೇಲ್ವಿಚಾರಣೆ ವಿಭಾಗ,ಪ್ರಧಾನ ಕಛೇರಿ,
ನಂ.6, ಲಕ್ಷ್ಮೀಸದನ, 5ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-18

ಮನೆಯ ವಿಳಾಸ:
ನಂ.62, ಹಳೆಯ ಸೋಪ್ ಫ್ಯಾಕ್ಟರಿ ರಸ್ತೆ,
ಪೈಪ್ ಲೈನ್ ವೆಸ್ಟ್, ಬಸವೇಶ್ವರನಗರ,
ಕನಕಪುರ ಟೌನ್, ರಾಮನಗರ ಜಿಲ್ಲೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 103 ರ ಅಡಿಯಲ್ಲಿ ಜಫ್ತಿ ಪೂರ್ವ ಆದೇಶ

ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 70 ರ ಅಡಿಯಲ್ಲಿ ದಾವೆಯನ್ನು ದಾಖಲು ಮಾಡಿದ್ದು, ಪ್ರತಿವಾದಿ 1 ರಿಂದ 4 ರವರಿಂದ ರೂ.97.00 ಲಕ್ಷಗಳನ್ನು ಶೇ.18 ರ ಬಡ್ಡಿಯೊಂದಿಗೆ ದುರುಪಯೋಗದ ಹಣವನ್ನು ಹಾಗೂ ಪ್ರತಿವಾದಿ 2 ರಿಂದ 4 ರವರಿಂದ ರೂ.59.00 ಲಕ್ಷಗಳನ್ನು ಶೇ.18 ರ ಬಡ್ಡಿಯೊಂದಿಗೆ, ಒಟ್ಟು ರೂ.1,56,00,000/- (ರೂ.ಒಂದು ಕೋಟಿ ಐವತ್ತಾರು ಲಕ್ಷಗಳು) ಗಳ ದುರುಪಯೋಗದ ಹಣವನ್ನು ವಸೂಲು ಮಾಡಿಕೊಡುವಂತೆ ದಾವಾದೇಶವನ್ನು ಕೋರಿರುತ್ತಾರೆ.

ಸದರಿ ದಾವೆಯಲ್ಲಿ ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 103 ರ ಅಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಜಫ್ತಿ ಪೂರ್ವ ಆದೇಶ ಮಾಡುವಂತೆ ಕೋರಿರುತ್ತಾರೆ.

ವಾದಿಯವರ ಪರವಾಗಿ ಬ್ಯಾಂಕಿನಿಂದ ಅಧಿಕಾರ ಪಡೆದ ನೌಕರನು ಹಾಜರಾಗಿದ್ದು, ಸಹಕಾರ ಸಂಘಗಳ ನಿಯಮ 55 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ವಕೀಲರ ನೆರವು ಕೋರಿಕೊಂಡಿರುತ್ತಾರೆ. ಸದರಿ ಅರ್ಜಿಯನ್ನು ಅಂಗೀಕರಿಸಲಾಯಿತು. ಬ್ಯಾಂಕಿನ ಪರವಾಗಿ ಶ್ರೀ ಡಿ.ಕೆ. ಶ್ರೀರಾಮಪ್ಪರವರು ಹಾಜರಾಗಿ ವಕಾಲತ್ತು ಸಲ್ಲಿಸಿ, ಪ್ರಕರಣವು ಅತಿ ಜರೂರಾಗಿರುವುದರಿಂದ ಇದನ್ನು ಪರಿಗಣಿಸಬೇಕೆಂದು ಕೋರಿ ವಾದವನ್ನು ಮಂಡಿಸಿರುತ್ತಾರೆ.

ಅರ್ಜಿದಾರರು ದಾವೆಯ ಜೊತೆ ಸಲ್ಲಿಸಿರುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103 ರ ಅರ್ಜಿಯಲ್ಲಿ ಈ ಮೇಲಿನ ಹಣಕ್ಕೆ ಪ್ರತಿವಾದಿಯ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ದಾವೆ ಇತ್ಯರ್ಥವಾಗುವವರೆವಿಗೆ ಜಫ್ತಿ ಪೂರ್ವ ಆದೇಶವನ್ನು ನೀಡುವಂತೆ ಪ್ರತಿಪಾದಿಸಿರುತ್ತಾರೆ. ದಾವೆಯೊಂದಿಗೆ ಲಗತ್ತಿಸಿರುವ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು

